ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಅದನ್ನು ಹೇಳಿಬಿಡುತ್ತೇನೆ. ಕೇಳಿ. ಹಲ್ಲು ಇಲ್ಲದ ಗಾಣ, ಕೊಂಬು ಇಲ್ಲದ ಎತ್ತು, ಕಡಾಣಿ ಇಲ್ಲದ ಗಾಡಿ, ತೂತು ಕೊಪ್ಪರಿಕೆ, ಹಾಗೆ ಕೆ.ಆರ್. ಆಸ್ಪತ್ರೆಯ ಆಂಬ್ಯುಲೆನ್ಸ್ ವ್ಯಾನ್‌ಗಳು. ಆದುದರಿಂದ, ಇದು ಸಾಲುತ್ತಿಲ್ಲ. ದಯಮಾಡಿ ನಿಮ್ಮ ಪಿರಿಯೆಡ್‌ನಲ್ಲಿ ಹೆಚ್ಚಿಗೆ ಆಂಬ್ಯುಲೆನ್ಸ್ ವ್ಯಾನ್‌ಗಳನ್ನು ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ: ಹಿರಿಯ ಸದಸ್ಯರಾದ ಮಾನ್ಯ ಹೆಚ್.ಎಸ್. ಶಂಕರಲಿಂಗೇಗೌಡರವರು ಹೇಳಿದ ಪ್ರಕಾರ, ಈಗಾಗಲೇ ಕೆ.ಆರ್. ಆಸ್ಪತ್ರೆಯಲ್ಲಿ ನಾಲ್ಕು ಆಂಬ್ಯುಲೆನ್ಸ್ ವ್ಯಾನ್‌ಗಳು ಇವೆ. ಚೆಲುವಾಂಬ ಆಸ್ಪತ್ರೆಯಲ್ಲಿ ಎರಡು ಆಂಬ್ಯುಲೆನ್ಸ್ ವ್ಯಾನ್‌ಗಳು ಇವೆ. ಆ ಎರಡೂ ಆಸ್ಪತ್ರೆಯ ಆಂಬ್ಯುಲೆನ್ಸ್ ವ್ಯಾನ್‌ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆ. ಆದಾಗ್ಯೂ ಸಹಿತ ಅಲ್ಲಿ ಹೆಚ್ಚಿನ ಆಂಬ್ಯುಲೆನ್ಸಿನ ಅವಶ್ಯಕತೆ ತಾವು ಹೇಳಿದ ಪ್ರಕಾರ ಇದೆ. ಅದಕ್ಕೆ ಸರ್ಕಾರ ಒಂದು ಹೈಟೆಕ್ ಆಂಬ್ಯುಲೆನ್ಸ್ ವ್ಯಾನ್‌ನ್ನು ಕೊಡಲಿಕ್ಕೆ ಯೋಚಿಸುತ್ತಿದೆ. ಅದಕ್ಕೆ ಸುಮಾರು 19 ಲಕ್ಷ ರೂಪಾಯಿ ವೆಚ್ಚ ತಗುಲಿದೆ. ಆದಷ್ಟು ಶೀಘ್ರದಲ್ಲಿ ಹೊಸ ಹೈಟೆಕ್ ಆಂಬ್ಯುಲೆನ್ಸ್ ವ್ಯಾನ್‌ನ್ನು ಕೆ.ಆರ್. ಆಸ್ಪತ್ರೆಗೆ ಒದಗಿಸಿಕೊಡಲಾಗುತ್ತದೆ.

ಪಾವಗಡ ತಾಲ್ಲೂಕಿನ ಆಸ್ಪತ್ರೆಗಳಿಗೆ ಸಿಬ್ಬಂದಿ ನೇಮಕಾತಿ

659 (6644) ಶ್ರೀ ಕೆ.ಎಂ. ತಿಮ್ಮರಾಯಪ್ಪ (ಪಾವಗಡ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ತಾಲ್ಲೂಕಿನಲ್ಲಿನ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ಹಾಗಿದ್ದರೆ, ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಇ) ಪ್ರಾಥಮಿಕ ಆರೋಗ್ಯ ಉಪ ಕೇಂದ್ರಗಳೆಷ್ಟು;

ಈ) ಇವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ;

ಉ) ಹಾಗಿದ್ದರೆ, ಇವುಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪಾವಗಡ ತಾಲ್ಲೂಕಿನ ಆಸ್ಪತ್ರೆಯಲ್ಲಿ ಮೂರು ವೈದ್ಯರ ಹುದ್ದೆ ಖಾಲಿ ಇರುತ್ತದೆ.

ಆ) ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಹಾಗೂ ರಾಜ್ಯ ಮಟ್ಟದಲ್ಲಿ ವೈದ್ಯರ ಕೊರತೆ ನೀಗಿಸಲು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. ಶೀಘ್ರದಲ್ಲಿಯೇ ನೇಮಕಾತಿ ಆದೇಶ ಜಾರಿಗೊಳಿಸಲಾಗುವುದು.

ಇ) 38 ಪ್ರಾಥಮಿಕ ಆರೋಗ್ಯ ಉಪಕೇಂದ್ರಗಳು ಇರುತ್ತದೆ.

ಈ) ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ 12 ಹುದ್ದೆಗಳು ಖಾಲಿ ಇರುತ್ತದೆ.

ಉ) ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ನಡೆಯುತ್ತಿದ್ದು, ಮುಗಿದ ಕೂಡಲೇ ನೇಮಕಾತಿ ಮಾಡಲಾಗುವುದು.

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಪಾವಗಡ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 'ಮೂರು' ಎಂದು ಉತ್ತರ ಕೊಟ್ಟಿದ್ದಾರೆ. ಇಡೀ ಆಸ್ಪತ್ರೆಗಳಲ್ಲಿ ಅಲ್ಲಿ ಮೂರೇ ವೈದ್ಯರು ಖಾಲಿ ಇರುವುದಿಲ್ಲ. ಎಲ್ಲಾ ವೈದ್ಯರೂ ಸಹ ಖಾಲಿ ಇರುವಂಥ ವ್ಯವಸ್ಥೆ ಅಲ್ಲಿ ನಿರ್ಮಾಣವಾಗಿದೆ. ಸಂಬಳ ವಗೈರೆಗಳೆಲ್ಲ ಅವರಿಗೆ ಸಂದಾಯವಾಗುತ್ತಿವೆ. ಆದರೆ ಅಲ್ಲಿ ವೈದ್ಯರು ಮಾತ್ರ ಯಾರೂ ಇಲ್ಲ. ಪೋಟಗುಡ್ಡ, ಮತ್ತು ಮಂಗಳೂರು ಆಸ್ಪತ್ರೆಯಲ್ಲಿ ವೈದ್ಯರೇ ಕೆಲಸ ಮಾಡುತ್ತಿಲ್ಲ. ಆದರೂ ಸಹ ಅಲ್ಲಿ ಜನರಿದ್ದು ಬಹಳ ಬೇಡಿಕೆ ಇದೆ. ಕೂಡಲೇ ಅಲ್ಲಿನ ಅವ್ಯವಸ್ಥೆಯ ಬಗ್ಗೆ ಸನ್ಮಾನ್ಯ ಸಚಿವರು ಆ ಕಡೆಗೆ ಗಮನಹರಿಸಿ ಆ ಆಸ್ಪತ್ರೆಗಳ ಸುಧಾರಣೆಗೆ ತಾವು ಅನುಕೂಲ ಮಾಡಿಕೊಡುತ್ತೀರಾ ಎಂದು ನಾನು ಕೇಳುತ್ತಾ, ಮತ್ತೆ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳು ಸಹ 12 ಹುದ್ದೆಗಳು ಖಾಲಿ ಇವೆ ಎಂದು ಸಚಿವರು ಉತ್ತರವನ್ನು ಕಳುಹಿಸಿದ್ದಾರೆ. ಆ ಭಾಗದಲ್ಲಿ 12 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳು ಖಾಲಿ ಇದ್ದರೂ ಸಹ ಅನೇಕ ಜನರಿಗೆ ತೊಂದರೆಯಾಗುತ್ತಿದೆ. ನಮಗೆ ರಾತ್ರಿ ವೇಳೆಯಲ್ಲಿ ಹೆರಿಗೆಯಾದಂಥ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆಂದು ಅವರು ತಮ್ಮ ಕಷ್ಟಗಳನ್ನು ಹೇಳುತ್ತಿದ್ದಾರೆ. ಕೂಡಲೇ ಆ ಹುದ್ದೆಗಳನ್ನು ತುಂಬಬೇಕೆಂದು ನಾನು ಅವರಿಗೆ ಮನವರಿಕೆ ಮಾಡುತ್ತಿದ್ದೇನೆ. ಮತ್ತು ಈ ಹುದ್ದೆಗಳ ಖಾಲಿ ಇರುವುದರ ಜೊತೆಗೆ ನಮ್ಮ ತಾಲ್ಲೂಕುಗಳಲ್ಲಿರುವ ಆಸ್ಪತ್ರೆಗಳಿಗೆ ಏನು ಔಷಧಿಗಳು ಸರಬರಾಜು ಆಗುತ್ತಿದೆ. ಆ ಔಷಧಿಗಳೂ ಸಹ ಸರಿಯಾದ ರೀತಿಯಲ್ಲಿ ಸರಬರಾಜು ಆಗುತ್ತಿಲ್ಲ. ಅವು ಸಹ ಕಳಪೆ ಔಷಧಿಗಳು ಸರಬರಾಜು ಆಗಿ ಖಾಲಿ ಪೊಟ್ಟಣಗಳು ಮಾತ್ರ ಅಲ್ಲಿ ಸರಬರಾಜು ಆಗುತ್ತಿವೆ. ದಯವಿಟ್ಟು ಸರ್ಕಾರ ಈ ಬಗ್ಗೆ ಗಮನಹರಿಸಿ ಅದನ್ನು ಪರಿಶೀಲನೆ ನಡೆಸಿ ತಪಿತಸ್ಥರು ಯಾರು ಇದ್ದಾರೆ ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಸದಸ್ಯರು ಹೇಳಿದ ಪ್ರಶ್ನೆಗೆ, ಸಮಸ್ಯೆಯು ಪಾವಗಡದಲ್ಲಿ ಹೆಚ್ಚು ಇದೆ. ಬೇರೆ ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರ್‌ಗಳ ಕೊರತೆ ಇರುವುದು ಸಹಜವಾಗಿದ್ದರೂ ಪಾವಗಡದಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ಸಮಸ್ಯೆ ಇದೆ. ಅಲ್ಲಿಗೆ ಯಾವುದೇ ಡಾಕ್ಟರ್ಸ್ ನೇಮಕಾತಿಯಾದರೂ ಸಹ ಅವರು ಹೋಗದೇ ಇರುವುದು ನನ್ನ ಗಮನಕ್ಕೆ ಬಂದು, ಸಾಕಷ್ಟು ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸಲಿಕ್ಕೆ ಇಲಾಖೆಗೆ ಈಗಾಗಲೇ ಸೂಕ್ಷ್ಮವಾಗಿ ಸೂಚನೆಯನ್ನು ಕೊಡಲಾಗಿದೆ. ಆದರೆ ಅವರು ಖಾಸಗಿಯಾಗಿಯೂ ನನಗೆ ಒಂದೆರಡು ಸಮಸ್ಯೆಗಳನ್ನು ತಿಳಿಸಿದ್ದಾರೆ. ನಮ್ಮ ಆಯುಕ್ತರಿಗೆ ನಾಳೆನೇ ಇಲಾಖೆಯ ಉನ್ನತ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಆ ಭಾಗದಲ್ಲಿನ ಸಂಪೂರ್ಣವಾದ ಯಾವುದೇ ಸಮಸ್ಯೆ ಇರಬಹುದು. ಆರೋಗ್ಯ ಇಲಾಖೆಯಲ್ಲಿ ಅದರ ಬಗ್ಗೆ ವರದಿಯನ್ನು ತರಿಸಿ ಅವರ ಜೊತೆಯಲ್ಲಿ ನಾನು ಮಾತನಾಡಿ, ಸಾಧ್ಯವಾದರೆ ನಾನು ಅವರ ಜೊತೆಯಲ್ಲಿ ಒಂದು ಮೀಟಿಂಗ್‌ನ್ನು ಸಹ ಕಂಡಕ್ಟ್ ಮಾಡಿ ಅವರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಏನೇ ಕೊರತೆ ಇರಬಹುದು, ಯಾವ ಸಮಸ್ಯೆ ಇರಬಹುದು ಅದನ್ನು ಬಗೆಹರಿಸುತ್ತೇವೆ. ಆದರೆ ನಮ್ಮ ಆಂಜನೇಯರವರು ಮಾತನಾಡುವ ಸಂದರ್ಭದಲ್ಲಿ, ತಮಿಳುನಾಡಿನಲ್ಲಿ ಮೂರು ಜನ

ನರ್ಸ್‌ಗಳನ್ನು ಎಂಟು ಗಂಟೆಗೆ, ಹನ್ನೆರಡು ಗಂಟೆಗೆ ಒಬ್ಬರಂತೆ ಮುರು ಜನ ಇಟ್ಟಿದ್ದಾರೆಂದು ಹೇಳಿದರು. ಇಲ್ಲೂ ಸಹ ನಾವು ನಂಜುಂಡಪ್ಪನವರ ವರದಿಯಾಧಾರದ ಮೇಲೆ 39 ಏನು ಮೋಸ್ಟ್ ಬ್ಯಾಕ್ ವರ್ಡ್ ತಾಲ್ಲೂಕುಗಳು ಇವೆ. ಅಲ್ಲಿ ಈಗಾಗಲೇ ನಾವು ಆದೇಶವನ್ನು ಕೊಟ್ಟಿದ್ದೇವೆ. ಎಂಟು ಗಂಟೆಗೊಬ್ಬರು ಪ್ರತಿ ಪಿಹೆಚ್‌ಸಿಗಳಿಗೆ ಮೂರು ಜನ ನರ್ಸ್ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ್ದೇವೆ. ಇವತ್ತೇನು ಅವರು ತಮ್ಮ ಪಾವಗಡದಲ್ಲಿ ಕೊರತೆ ಬಗ್ಗೆ ಹೇಳುತ್ತಿದ್ದಾರೆ. ನಾನು ಆಗಲೇ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದೇನೆ. ಇವತ್ತು ಇನ್‌ಸರ್ವೀಸ್ ಇರತಕ್ಕಂಥ ಪಿಜಿಯನ್ನು 30 ರಿಂದ 50 ಪರ್ಸೆಂಟ್‌ಗೆ ಜಾಸ್ತಿ ಮಾಡಿದ್ದೇವೆ. ಗೌರ್ನಮೆಂಟ್ ಮೆಡಿಕಲ್ ಕಾಲೇಜ್‌ನಲ್ಲಿ ಎಂಬಿಬಿಎಸ್ ಯಾರ್ಯಾರು ವಿದ್ಯಾಭ್ಯಾಸ ಮಾಡಿದವರೂ ಸಹ ಕಂಪಲ್‌ಸರಿ ಒಂದು ವರ್ಷ ಸರ್ಕಾರದಲ್ಲಿ ಸೇವೆ ಸಲ್ಲಿಸಬೇಕು ಎನ್ನುವ ಒಂದು ಬಾಂಡ್‌ನ್ನೂ ಕೂಡ ನಾವು ತೆಗೆದುಕೊಳ್ಳುತ್ತಿದ್ದೇವೆ. ಅನೇಕ ಪ್ರಕ್ರಿಯೆಗಳನ್ನು ಸರ್ಕಾರದ ಹಂತದಲ್ಲಿ ನಾವು ನೇಮಕಾತಿ ವಿಚಾರದಲ್ಲಿ, ಡಾಕ್ಟರ್‌ರವರನ್ನು ಹಳ್ಳಿಯಲ್ಲಿ ಕೆಲಸ ಮಾಡತಕ್ಕಂಥ ವಿಚಾರದಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ನಾವು ಈಗಾಗಲೇ ಶಿಸ್ತಿನ ಕ್ರಮ ಜರುಗಿಸುತ್ತಿದ್ದೇವೆ. ಈಗಾಗಲೇ ನಮಗೆ ಯಾರೆ ಟಿವಿಯಲ್ಲಿ ಬರಲಿ, ಪತ್ರಿಕೆಗಳಲ್ಲಿ ಬರಲಿ, ಅಥವಾ ಶಾಸಕರು ಹೇಳಲಿ, ಅವರವರ ಮತಕ್ಷೇತ್ರದ ಬಗ್ಗೆ ಯಾವುದೇ ಸಮಸ್ಯೆ ಬಗ್ಗೆ ನನಗೆ ತಿಳಿಸಿದರೆ ತಕ್ಷಣ ಅವತ್ತೇ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇವತ್ತು ಹುಣಸೂರಿನಲ್ಲಿ ನಮ್ಮ ಜಿ.ಟಿ. ದೇವೇಗೌಡರವರು ಹೇಳಿದ ಎರಡೇ ದಿವಸಗಳಲ್ಲಿ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಮಡಿಕೇರಿಯಲ್ಲಿ ತೆಗೆದುಕೊಂಡಿದ್ದೇವೆ. ಆನೇಕಲ್‌ನಲ್ಲಿ ತೆಗೆದುಕೊಂಡಿದ್ದೇವೆ. ಬಹುಶಃ ನಮ್ಮ ಯಾವುದೇ ಶಾಸಕರು ನನ್ನ ಗಮನಕ್ಕೆ ಅವರ ಕ್ಷೇತ್ರದಲ್ಲಿರತಕ್ಕಂಥ ಸಮಸ್ಯೆಯ ಬಗ್ಗೆ ನಿಖರವಾಗಿ ನನಗೆ ಕಳುಹಿಸಿದರೆ ಖಂಡಿತ ನಾನು ಅವತ್ತೇ ಕ್ರಮ ಜರುಗಿಸುತ್ತೇನೆ. ಅದರಲ್ಲಿ ಯಾವುದೇ ತರಹ ಹಿಂದೆ ಮುಂದೆ ನೋಡತಕ್ಕಂಥ ಪ್ರಶ್ನೆಯಿಲ್ಲ.

ಶ್ರೀ ಶಿವರಾಜ್ ಸಜ್ಜನರ್: ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು: ಒಂದು ನಿಮಿಷ, ಅವರದ್ದು ಇನ್ನೂ ಪೂರ್ಣವಾಗಿಲ್ಲ. ತಿಮ್ಮರಾಯಪ್ಪನವರದ್ದು ಪೂರ್ಣವಾಗಿಲ್ಲ. ನೀವು ಕೇಳಿ.....

ಶ್ರೀ ಕೆ.ಎಂ. ತಿಮ್ಮರಾಯಪ್ಪ: ತಮ್ಮ ಉತ್ತರದಲ್ಲಿ ತಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಒಂದು ಮಾತು ಹೇಳಿದಿರಿ. ಜೊತೆಗೆ ನಮ್ಮ ಪಾವಗಡದಲ್ಲಿ ಅದು ಪ್ರತ್ಯೇಕವಾದಂಥ ತಾಲ್ಲೂಕು, ಅಲ್ಲಿ ಈಗಾಗಲೇ 30 ಹಾಸಿಗೆವುಳ್ಳ ಆಸ್ಪತ್ರೆ ಇದೆ. ಅದು ಈಗಾಗಲೇ ಉತ್ತಮ ಸ್ಥಿತಿಯಲ್ಲಿ ಇಲ್ಲ. ಅದನ್ನು ಮೇಲ್ದರ್ಜೆಗೇರಿಸಿ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ತಾವು ಮಾರ್ಪಾಡು ಮಾಡಿ ಕೊಡಬೇಕೆಂದು ನಾನು ಈ ಮೂಲಕ ತಮ್ಮನ್ನು ಕೇಳುತ್ತಿದ್ದೇನೆ. ಮತ್ತೆ ಕಳಪೆ ಔಷಧಿಗಳ ಬಗ್ಗೆ ತಾವು ಸ್ವಲ್ಪ ಗಂಭೀರವಾಗಿ ಅದನ್ನು ತನಿಖೆ ನಡೆಸಬೇಕೆಂದು ಸಹ ತಮಗೆ ಈ ಮೂಲಕ ಕೋರುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ್: ಮಾನ್ಯ ಉಪಾಧ್ಯಕ್ಷರೇ, ಇದು ಏನಾಗಿದೆ ಎಂದರೆ, ಡಾಕ್ಟರ್ಸ್ ಏಕೆ ಹಳ್ಳಿಗಳಲ್ಲಿ ಇಲ್ಲ, ಅಂದರೆ ನಮ್ಮ ಸರ್ಕಾರ ಕೊಡತಕ್ಕಂತ ಸ್ಯಾಲರಿ ಏನು ಇದೆ. ಎಂಬಿಬಿಎಸ್ ಆದವರಿಗೆ 11 ಸಾವಿರ ರೂ. ಪಿಜಿ ಆದವರಿಗೆ 13 ಸಾವಿರ ರೂ. ಕೊಡುತ್ತಾರೆ.

ಈ ಸಂಬಳಕ್ಕೆ ಡಾಕ್ಟರ್ಸ್ ಯಾರೂ ಹಳ್ಳಿಗಳಿಗೆ ಬರುವುದಕ್ಕೆ ಸಾಧ್ಯವಿಲ್ಲ. ನಮ್ಮ ನೆರೆ ರಾಜ್ಯ ಮಹಾರಾಷ್ಟ್ರದಲ್ಲಿ ಎಂಬಿಬಿಎಸ್ ಆದವರಿಗೆ 17 ಸಾವಿರ ರೂ. ಕೊಡುತ್ತಾರೆ. ಪಕ್ಕದ ಆಂಧ್ರದಲ್ಲಿ 22 ಸಾವಿರ ರೂ. ಕೊಡುತ್ತಾರೆ.

ಉಪಾಧ್ಯಕ್ಷರು: ಎಷ್ಟು ಕೊಡಬೇಕೆಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ನಮ್ಮ ಪಕ್ಕದ ರಾಜ್ಯಗಳು ಏನು ಕೊಡುತ್ತವೆ ಆ ರೀತಿಯಲ್ಲಿ ಕೊಡಿ, ಮಹಾರಾಷ್ಟ್ರದವರು ಏನು 17 ಸಾವಿರ ರೂ. ಕೊಡುತ್ತಾರೆ. ಆಂಧ್ರದವರು ಏನು 22 ಸಾವಿರ ರೂ. ಕೊಡುತ್ತಾರೆ. ಇದನ್ನು ಹೋಲಿಕೆ ಮಾಡಿ ಕೊಟ್ಟರೆ ಒಳ್ಳೆಯದಾಗುತ್ತದೆ ಮತ್ತು ಡಾಕ್ಟರ್ಸ್ ಕೂಡ ಬರುತ್ತಾರೆ. ಇಲ್ಲದಿದ್ದರೆ ಯಾವ ಡಾಕ್ಟರ್ಸ್ ಸಹ ಬರಲಿಕ್ಕೆ ಸಾಧ್ಯವಾಗುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು: ಇಬ್ಬರದ್ದೂ ಸೇರಿಸಿದರೆ 20 ಸಾವಿರ ರೂ. ಎಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಮತ್ತೊಂದು ನರ್ಸ್‌ಗಳನ್ನು, ಇವರು ಎಎನ್‌ಎಂಗಳನ್ನು ಹೇಳುತ್ತಿದ್ದಾರೆ. ನರ್ಸ್‌ಗಳನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ. ನರ್ಸಿಂಗ್ ಕೋರ್ಸ್ ಮಾಡಿದವರು. ಬಿಎಸ್‌ಸಿ ನರ್ಸಿಂಗ್ ಮಾಡಿದವರನ್ನು ಒಂದೊಂದು ಪಿಹೆಚ್‌ಸಿಗೆ ಒಂದೊಂದು ಸ್ಯಾಂಕ್ಷನ್ಡ್ ಪೋಸ್ಟ್ ಕೊಡಬೇಕೆಂದು ಮತ್ತು ಎರಡನೇಯದಾಗಿ ಡಾಕ್ಟರ್‌ಗಳನ್ನು ನೇಮಕಾತಿ ಮಾಡಿಕೊಳ್ಳಬೇಕು. ಇವತ್ತಿಗೆ ಡಾಕ್ಟರ್ಸ್‌ಗೆ ಏನಾಗಿದೆ, ಎಂದರೆ ಮೀಟಿಂಗ್ಸ್ ಅವು ಇವು ಬಂದು, ವಾರದಲ್ಲಿ ಅವರು ಎರಡು ದಿನಗಳು ಕೂಡ ಹಳ್ಳಿಗಳ ಆಸ್ಪತ್ರೆ, ಪಿಹೆಚ್‌ಸಿಗಳಲ್ಲಿ ಸಿಕ್ಕುತ್ತಿಲ್ಲ. ಅದಕ್ಕೆ ಸೆಕೆಂಡ್ ಡಾಕ್ಟರ್‌ನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಶಿವರಾಜ್ ಸಜ್ಜನರ್: ಈಗಾಗಲೇ ಕಳಪೆ ಔಷಧಿ ಪೂರೈಕೆಯ ಬಗ್ಗೆ ಮಾನ್ಯ ಪಾವಗಡದ ಶಾಸಕರಾದ ತಿಮ್ಮರಾಯಪ್ಪನವರು ಮಾತನಾಡಿದರು. ಅನೇಕ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಗ್ಲೋಟ್ರೊ ಮೈಜಲ್ ಎನ್ನುವಂಥ ಒಂದು ಕ್ರೀಂ ಅನ್ನು ಸಪ್ಲೈ ಮಾಡಿದ್ದಾರೆ. 15 ಗ್ರಾಂ ಕ್ರೀಂ ಇದರಲ್ಲಿ ಇರಬೇಕು, ಆದರೆ ಸಂಪೂರ್ಣವಾಗಿ ಇದರಲ್ಲಿ ಖಾಲಿ ಇದೆ. ಇದರಲ್ಲಿ ದೊಡ್ಡ ಪ್ರಮಾಣದ ಒಂದು ಅವ್ಯವಹಾರ ನಡೆಯುತ್ತಿದೆ ಎಂದು ನನಗೆ ಅನ್ನಿಸುತ್ತದೆ. ಇದರಲ್ಲಿ ಔಷಧಿಯೇ ಇಲ್ಲ. ಸಂಪೂರ್ಣವಾಗಿ ಖಾಲಿ ಇರುವಂಥ ಕ್ರೀಂಗಳನ್ನು ಆರೋಗ್ಯ ಈ ಘಟಕಗಳಿಗೆ ಹಾಗೂ ಸರ್ಕಾರಿ ದವಖಾನೆಗಳಿಗೆ ಕೊಡುತ್ತಿದ್ದಾರೆ. ಇದರಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರ ನಡೆಯುತ್ತಿದೆ. ಇದನ್ನು ಸಂಪೂರ್ಣವಾಗಿ ತನಿಖೆ ಮಾಡಬೇಕು. ಇದರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಬೇಕಾಗಿರುವುದರಿಂದ ಒಂದು ಸದನ ಸಮಿತಿಯನ್ನು ನೇಮಕ ಮಾಡಬೇಕು. ಫಿಲ್ಕೋ ಫಾರ್ಮಾಸ್ಯೂಟಿಕಲ್ಸ್ ಕಂಪನಿಯವರು ಇದನ್ನು ಸರಬರಾಜು ಮಾಡಿದ್ದಾರೆ. ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತೆ ಇವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಸಂಬಂಧಪಟ್ಟವರನ್ನು ಜೈಲಿಗೆ ಹಾಕಬೇಕೆಂದು ತಮ್ಮ ಮುಖಾಂತರ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವೂ ಕೂಡ ಈ ಕ್ರೀಂನ್ನು ಪರಿಶೀಲನೆ ಮಾಡಬಹುದು. ಇದು ಸಂಪೂರ್ಣವಾಗಿ ಪ್ಯಾಕ್ ಆಗಿರತಕ್ಕಂತ ಒಂದು ಪೊಜಿಷನ್‌ನಲ್ಲಿದೆ. ಆದರೆ, ಇದರ ಒಳಗಡೆ ಒಂದು ಗ್ರಾಂ ಕೂಡ ಔಷಧಿ ಇಲ್ಲ. ಇಂಥ ದೊಡ್ಡ ದೊಡ್ಡ ಬಾಕ್ಸ್‌ಗಳು ಇವತ್ತಿನ ದಿವಸ ಆಸ್ಪತ್ರೆಗಳಿಗೆ ಸರಬರಾಜು ಆಗುತ್ತಿವೆ. ಆದ್ದರಿಂದ, ತಾವು ದಯವಿಟ್ಟು ಇದರ ಬಗ್ಗೆ ಗಮನಹರಿಸಿ ತನಿಖೆ ಮಾಡುವುದಕ್ಕೋಸ್ಕರ ಸದನ ಸಮಿತಿಯನ್ನು ನೇಮಕ ಮಾಡಿ ಸಂಬಂಧಪಟ್ಟಂಥ

ಕಂಪನಿಗಳ ಮೇಲೆ ಉಗ್ರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸನ್ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಮಹಿಮಾ ಜೆ. ಪಟೇಲ್: ಮಾನ್ಯ ಉಪಾಧ್ಯಕ್ಷರೆ, ಚೆನ್ನಗಿರಿಯ ಆಸ್ಪತ್ರೆಗೆ ನಾನು ಮೊನ್ನೆ ದಿವಸ ಭೇಟಿ ನೀಡಿದ್ದೆ. ಅಲ್ಲಿ ಬೆಡ್‌ಶೀಟ್ ಇಲ್ಲದೆ ಅಲ್ಲಿರತಕ್ಕಂಥ ರೆಜ್ಜಿನ್ ಬೆಡ್‌ಗಳ ಮೇಲೆ ಯಾರಾದರೂ ಮಲಗಿದರೆ ಒಂದೇ ದಿನದಲ್ಲಿ ಬೆಡ್‌ಸೋರ್ ಆಗತಕ್ಕಂಥ ಪರಿಸ್ಥಿತಿ ಇದೆ. ಬೆಡ್‌ಶೀಟ್ ಇಲ್ಲವೇ ಎಂದು ಕೇಳಿದ್ದಕ್ಕೆ ಸರಬರಾಜು ಇಲ್ಲವೆಂದು ಹೇಳುತ್ತಾರೆ. ಇಂಥ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಬೆಡ್‌ಶೀಟ್‌ಗಳನ್ನು ಒದಗಿಸತಕ್ಕಂಥ ಒಂದು ವ್ಯವಸ್ಥೆ ಆಗಬೇಕು.

ಶ್ರೀ ಶಿವರಾಜ್ ಸಜ್ಜನರ್: ಮಾನ್ಯ ಉಪಾಧ್ಯಕ್ಷರೆ, ಇದು ಕೇವಲ ಚೆನ್ನಗಿರಿ ಆಸ್ಪತ್ರೆಯಲ್ಲೊಂದು ಕಡೆಯಲ್ಲದೆ ಇಡೀ ರಾಜ್ಯದಲ್ಲಿರತಕ್ಕಂತ ಎಲ್ಲಾ ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆ ಇದೆ.

ಉಪಾಧ್ಯಕ್ಷರು: ಇದೇನು ಪ್ರಶ್ನೋತ್ತರ ವೇಳೆ ಎಂದು ತಿಳಿದುಕೊಂಡಿದ್ದೀರಾ ಅಥವಾ ಏನು ತಿಳಿದುಕೊಂಡಿದ್ದೀರಾ? ಇದಕ್ಕೆ ಏನೂ ಅರ್ಥವೇ ಇಲ್ಲವೆ? ಇದಕ್ಕೆ ಗೌರವ ಇಲ್ಲದ ಹಾಗೆ ಮಾಡುತ್ತೀರಿ. ಈಗಾಗಲೇ ತಾವು ಕೇಳಿದ್ದೀರಾ. ಕೇಳಿರತಕ್ಕಂಥ ಪ್ರಶ್ನೆಗಳನ್ನು ಮತ್ತೆ ಕೇಳುತ್ತಾ ಹೋದರೆ ಹೇಗೆ?

ಶ್ರೀ ಶಿವರಾಜ್ ಸಜ್ಜನರ್: ಮಾನ್ಯ ಉಪಾಧ್ಯಕ್ಷರೆ, ಈ ಪರಿಸ್ಥಿತಿ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿವೆ.

ಉಪಾಧ್ಯಕ್ಷರು: ಈ ವಿಷಯದ ಬಗ್ಗೆ ಚರ್ಚೆಯನ್ನು ಮಧ್ಯಾಹ್ನ ಊಟದ ನಂತರ ಆದಮೇಲೆ ಇಟ್ಟುಕೊಳ್ಳೋಣ. ಮಾನ್ಯ ನಾಗರಾಜ್ ಶೆಟ್ಟಿಯವರೆ, ಮಧ್ಯಾಹ್ನ 2.30 ಗಂಟೆಗೆ ಮತ್ತೆ ಕುಳಿತುಕೊಳ್ಳೋಣ. ಮಾನ್ಯ ಸಚಿವರು ಉತ್ತರ ಕೊಡಿ.

ಶ್ರೀ ಬಿ. ನಾಗರಾಜಶೆಟ್ಟಿ: ಮಾನ್ಯ ಉಪಾಧ್ಯಕ್ಷರೆ, ಆಸ್ಪತ್ರೆಗಳನ್ನು ಖಾಸಗೀಕರಣ ಮಾಡುತ್ತಾರೆಂದು ತಿಳಿದು ಬಂದಿದೆ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಖಾಸಗೀಕರಣ ಮಾಡತಕ್ಕಂಥಾದ್ದು ಸರ್ಕಾರದ ಮುಂದೆ ಇಲ್ಲ.

ಉಪಾಧ್ಯಕ್ಷರು: ಮಾನ್ಯ ಆರೋಗ್ಯ ಸಚಿವರೇ, ಅವರು ಏನೋ ಹೇಳುತ್ತಾರೆ. ಆದ್ದರಿಂದ, ಅವರು ಏನು ಹೇಳುತ್ತಾರೆಂಬುದನ್ನು ಕೇಳಿ ಆನಂತರ ಉತ್ತರ ಕೊಡಿ.

ಶ್ರೀ ಹೆಚ್.ಎಂ. ವಿಶ್ವನಾಥ್: ಮಾನ್ಯ ಉಪಾಧ್ಯಕ್ಷರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಪೂರಕವಾದ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮೀಣ ಪ್ರದೇಶದಲ್ಲಿ ಅಂದರೆ, ವಿಶೇಷವಾಗಿ ಪಶ್ಚಿಮ ಘಟ್ಟದ ಸಕಲೇಶಪುರ ಮತ್ತು ಆಲೂರು ಪ್ರದೇಶಗಳಲ್ಲಿ ಈಗಾಗಲೇ ಒಂದು ಘಂಟೆಗೆ 7, 9 ಇಂಚು ಮಳೆಬಿದ್ದು ದಿನದಲ್ಲಿ 24 ಇಂಚು ಮಳೆ ಬಿದ್ದಿರತಕ್ಕಂಥದ್ದು ಕೂಡ ಇವತ್ತು ರೆಕಾರ್ಡ್ ಆಗಿದೆ. ವರ್ಷ ಪೂರ್ತಿ ಬರತಕ್ಕಂತ ಮಳೆಗಿಂತ ಈಗಾಗಲೇ ಸುಮಾರು 30 ರಿಂದ 40 ಇಂಚು ಮಳೆ ಜಾಸ್ತಿಯಾಗಿದೆ. ಈಗ ಅಲ್ಲಿ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಹಿನ್ನೀರಿನಿಂದ ನೀರು ಬಂದು ಅಲ್ಲಿರತಕ್ಕಂತ ಹಳ್ಳಿಗಳ ಸುತ್ತ ನಿಂತುಕೊಂಡು ಇರತಕ್ಕಂತ ಕಾಯಿಲೆಗಳೆಲ್ಲಾ ನಮ್ಮ ಜನರಿಗೆ ಪ್ರಾರಂಭವಾಗಿದೆ. ಮೊನ್ನೆ ದಿವಸ ಒಂದು ದೊಡ್ಡ ಚಳುವಳಿ ಆಯಿತು. ಇದು ನಿಮಗೆ ಗೊತ್ತಿರಬೇಕು.

ಉಪಾಧ್ಯಕ್ಷರು: ದಯವಿಟ್ಟು ಇದರ ಬಗ್ಗೆ ಭಾಷಣ ಮಾಡುವುದಕ್ಕೆ ಹೋಗಬೇಡಿ. ಪ್ರಶ್ನೆ ಏನಾದರೂ ಇದ್ದರೆ ಕೇಳಿ. ಇಷ್ಟೊಂದು ಡೀಟೇಲ್ ಆಗಿ ಹೋಗತಕ್ಕಂಥದ್ದು ಬೇಕಾಗಿಲ್ಲ.

ಶ್ರೀ ಹೆಚ್. ಎಂ. ವಿಶ್ವನಾಥ್: ಮಾನ್ಯ ಉಪಾಧ್ಯಕ್ಷರೆ, ಪಶ್ಚಿಮಘಟ್ಟ ದಲ್ಲಿರುವ ಹೆತ್ತೂರು ಎನ್ನುವ ಗ್ರಾಮದ ಹೋಬಳಿ ಹೆಡ್ ಕ್ವಾರ್ಟ್ರ್ಸ್‌ನಲ್ಲಿ ಹೆರಿಗೆ ಆಸ್ಪತ್ರೆ ಇದೆ. ಆದರೆ ಅಲ್ಲಿ ಡಾಕ್ಟರ್‌ಗಳನ್ನು ಅಪ್ ಗ್ರೇಡ್ ಮಾಡಿಲ್ಲ. ಅಲ್ಲಿ ಯಾರೂ ಡಾಕ್ಟರ್ ಇಲ್ಲ. ಇನ್ನೂ ಆಲೂರು ತಾಲ್ಲೂಕಿನಲ್ಲಿ ಸುಮಾರು 70 ಸಾವಿರ ಜನಸಂಖ್ಯೆ ಇದ್ದು, ಅಲ್ಲಿ 30 ಬೆಡ್‌ನ ಒಂದು ಆಸ್ಪತ್ರೆ ಮಾಡಲಾಗಿದೆ. ಆದರೆ ಅಲ್ಲಿಗೆ ಡಾಕ್ಟರ್ ಮತ್ತು ಸಿಬ್ಬಂದಿ ವರ್ಗಕ್ಕೆ ಸರ್ಕಾರ ಮಾನ್ಯತೆ ಮಾಡಿಕೊಟ್ಟಿಲ್ಲ. ಹಾಗೆಯೇ ಸಕಲೇಶಪುರದಲ್ಲಿ ಒಂದು ದೊಡ್ಡ ಆಸ್ಪತ್ರೆ ಇದ್ದು ಅಲ್ಲಿ 12 ಜನ ವೈದ್ಯರು ಇರಬೇಕು. ಆದರೆ ಕೇವಲ 8 ಜನ ಮಾತ್ರ ವೈದ್ಯರುಗಳು ಇದ್ದಾರೆ. ಹಾಗೆಯೇ ಅಗತ್ಯವಾದ ಔಷಧಿಗಳು ಅಲ್ಲಿ ಇಲ್ಲ. ಮೊನ್ನೆ ದಿವಸ ನಾವು ಆಸ್ಪತ್ರೆ ನಿಧಿಯಿಂದ 2 ಲಕ್ಷ ರೂಪಾಯಿ ಔಷಧಿ ಕೊಂಡುಕೊಂಡಿದ್ದೇವೆ. ಇವತ್ತು ಯೂಜರ್ಸ್ ಚಾರ್ಜ್ ಎಂದು ನಾವೇನು ಹಣ ತೆಗೆದುಕೊಳ್ಳುತ್ತೇವೆ. ಈ ಚಾರ್ಜ್‌ನ ಹಣದಿಂದ ಔಷಧಿ ಕೊಂಡುಕೊಳ್ಳತಕ್ಕಂತ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಈ ಆಸ್ಪತ್ರೆ ಕಡೆ ಗಮನ ಹರಿಸಲಿಲ್ಲವೆಂದರೆ, ಜನರು ಉಳಿದುಕೊಳ್ಳತಕ್ಕಂಥ ಸ್ಥಿತಿ ಇಲ್ಲ. ಮೊನ್ನೆ ದಿವಸ ಅಲ್ಲಿ ಒಂದು ಮಗು ಸತ್ತು ಹೋಯಿತೆಂದು ಹೇಳಿ ಒಂದು ದೊಡ್ಡ ಚಳುವಳಿ ಕೂಡ ಆಗಿದೆ. ಈ ರೀತಿಯಾದ ಚಳುವಳಿಗಳು ಮತ್ತು ಗಲಾಟೆಗಳು ಆರೋಗ್ಯ ಇಲಾಖೆ ಮೇಲೆ ಮತ್ತು ಆರೋಗ್ಯದ ವ್ಯವಸ್ಥೆಯೊಳಗೆ ಆಗುವುದಾದರೆ ಭಾರಿ ಕಷ್ಟವಾಗುತ್ತದೆ. ಆದ್ದರಿಂದ ಸಕಲೇಶಪುರ ಆಸ್ಪತ್ರೆಗೆ ಸಂಬಂಧಪಟ್ಟಂತೆ ನಾನು ತುರ್ತಾಗಿ ಕೇಳುವುದೇನೆಂದರೆ, ಈ ಎರಡೂ ಆಸ್ಪತ್ರೆಗೆ ಬೇಕಾಗಿರತಕ್ಕಂಥ ಸಿಬ್ಬಂದಿಗಳನ್ನು ನೇಮಿಸಿಕೊಡತಕ್ಕಂಥದ್ದು ಮತ್ತು ಅಲ್ಲಿಗೆ ಬೇಕಾಗಿರತಕ್ಕಂಥ ವೈದ್ಯರನ್ನು ನೇಮಿಸತಕ್ಕಂಥ ಕೆಲಸ ಆಗಬೇಕು. ಮತ್ತೆ ನಮ್ಮಲ್ಲಿ ವಿಶೇಷವಾಗಿ ಗ್ಯಾಸ್ ಲಾರಿಗಳು ಮತ್ತು ಮೈನ್ಸ್ ಲಾರಿಗಳ ಪ್ರಯಾಣ ಜಾಸ್ತಿಯಾಗಿದೆ. ಇಲ್ಲಿ ಸುಮಾರು ಒಂದು ದಿವಸಕ್ಕೆ ಒಂದು ಸಾವಿರ ಲಾರಿಗಳು ಪ್ರಯಾಣ ಮಾಡುತ್ತಿದ್ದು, ದಿನಂಪ್ರತಿ ಅಲ್ಲಿ ಆಕ್ಸಿಡೆಂಟ್‌ಗಳು ಆಗುತ್ತಿವೆ. ಅದಕ್ಕೋಸ್ಕರ ಸರ್ಕಾರದವರಲ್ಲಿ ನಾನು ಕೇಳುವುದೇನೆಂದರೆ, ಇವತ್ತು ಅಪಘಾತ ಆಗತಕ್ಕಂಥದ್ದನ್ನು ತಡೆಯುವುದಕ್ಕೆ ಆಗುವುದಿಲ್ಲ. ಆದರೆ ಅಪಘಾತಕ್ಕೆ ಒಳಗಾಗಿರತಕ್ಕಂಥವರನ್ನು ಬದುಕಿಸಬಹುದಲ್ಲ? ಇವತ್ತಿನ ದಿವಸ ಪಶ್ಚಿಮ ಘಟ್ಟದ ಘಾಟ್ ಪ್ರದೇಶಗಳಲ್ಲಿ ಆಕ್ಸಿಡೆಂಟ್ ಆದರೆ ಅವರನ್ನು ಆಸ್ಪತ್ರೆಗಳಿಗೆ ತರಬೇಕಾದರೆ ಸುಮಾರು ಎರಡು ಗಂಟೆ ಬೇಕಾಗುತ್ತದೆ. ಆದ್ದರಿಂದ, ಇಲ್ಲಿಗೊಂದು ಮೊಬೈಲ್ ಆಸ್ಪತ್ರೆಯನ್ನು ಕೂಡಲೇ ಬಿಡುಗಡೆ ಮಾಡಿಕೊಡಬೇಕು. ಹಾಗೆಯೇ ಬ್ಲಡ್ ಬ್ಯಾಂಕ್ ಮಾಡುವುದಕ್ಕೂ ಕೂಡ ಒಂದು ವ್ಯವಸ್ಥೆ ಮಾಡಿಕೊಡಬೇಕು. ಈಗಾಗಲೇ ಪ್ರತಿದಿನ ಇಲ್ಲಿ ಆಕ್ಸಿಡೆಂಟ್ ಆಗಿ ಹತ್ತಾರು ಜನ ಸಾಯುತ್ತಿದ್ದಾರೆ. ಆದ್ದರಿಂದ, ನಾನು ಈಗ ಹೇಳಿರತಕ್ಕಂಥವು ಅತ್ಯಂತ ಜರೂರಾಗಿರುವುದರಿಂದ ಇದರ ಬಗ್ಗೆ ಸರ್ಕಾರ ಗಮನಹರಿಸಿ ಇದಕ್ಕೆ ಉತ್ತರ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಖಾಸಗೀಕರಣ ಮಾಡತಕ್ಕಂಥದ್ದರ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳು ಇಲ್ಲ. ಆದರೆ, ಪಿಹೆಚ್‌ಸಿ ಮತ್ತು ಸಿಹೆಚ್‌ಸಿಗಳನ್ನು ಯಾರಾದರೂ ಎನ್‌ಜಿಓ ನವರು ವಹಿಸಿಕೊಂಡರೆ ಅವುಗಳನ್ನು

ನಡೆಸುವುದಕ್ಕೆ ಅನುಮತಿ ಕೊಡತಕ್ಕಂತದ್ದು ನಮ್ಮ ಮುಂದೆ ಇದೆ. ಅದು ಸೂಕ್ತವಿದ್ದರೆ ಮಾತ್ರ ಕೊಡಲಾಗುತ್ತದೆ. ಮಾನ್ಯ ಮಾಧುಸ್ವಾಮಿಯವರೇ, ಅಲ್ಲಿ ಸರಿಯಾಗಿ ನಡೆಯುತ್ತಿಲ್ಲವೆಂದು ಹೇಳಿದ ನಂತರ ನಾವೂ ಕೂಡ ಹೋಗಿ ನೋಡಿದ್ದೇವೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ನಮ್ಮ ಮುಂದೆ ಆ ರೀತಿಯಾದ ಯಾವುದೇ ಪ್ರೊಪೋಸಲ್ ಇಲ್ಲ. ಈಗ ಕೊಟ್ಟಿರತಕ್ಕಂಥವುಗಳನ್ನು ಕೂಡ ನಾವು ಪರಿಶೀಲಿಸುತ್ತೇವೆ. ಮತ್ತೆ ಈಗ ಮಾನ್ಯ ಮಹಿಮಾ ಪಟೇಲ್‌ರವರು ಕೆಲವು ವಿಚಾರಗಳನ್ನು ಈಗ ಹೇಳಿದರು. ಆಸ್ಪತ್ರೆಗಳ ವ್ಯವಸ್ಥೆಯಲ್ಲಿ ಡಿಸ್ಟ್ರಿಕ್ಟ್ ಸೆಕ್ಟರ್ ಮತ್ತು ಸ್ಟೇಟ್ ಸೆಕ್ಟರ್ ಎಂದು ಎರಡು ಇವೆ. ಡಿಸ್ಟ್ರಿಕ್ಟ್ ಸೆಕ್ಟರ್ ಆಸ್ಪತ್ರೆಗಳಿಗೆ ಸಂಬಂಧಪಟ್ಟಂಥ ಜಿಲ್ಲಾ ಪಂಚಾಯತ್‌ನವರೇ ಮಾಡಬೇಕಾಗುತ್ತದೆ. ಮತ್ತೆ ಇದಕ್ಕೆ ಬೇಕಾಗಿರತಕ್ಕಂಥ ಅನುದಾನ ಆರ್ಥಿಕ ಇಲಾಖೆಯಿಂದ ಅಲೋಕೇಶನ್ ಹೋಗುತ್ತದೆ. ಈ ಆಸ್ಪತ್ರೆಗಳ ಬೆಡ್‌ಶೀಟ್ ಬದಲಾವಣೆ ಮಾಡತಕ್ಕಂತದ್ದು ಮತ್ತು ಬೆಡ್‌ಚೇಂಜ್ ಮಾಡುವುದು ಹಾಗೂ ಸಣ್ಣಪುಟ್ಟ ಸಾಮಗ್ರಿಗಳನ್ನು ಖರೀದಿ ಮಾಡತಕ್ಕಂಥಾದ್ದು ಸಂಬಂಧಪಟ್ಟಂಥ ಜಿಲ್ಲಾ ಪಂಚಾಯತ್ ಅಡಳಿತ ವ್ಯವಸ್ಥೆಯಲ್ಲಿ ಅವರೇ ಖರೀದಿ ಮಾಡಬೇಕಾಗುತ್ತದೆ. ಮತ್ತು ಇದಕ್ಕೆ ಬೇಕಾಗಿರತಕ್ಕಂಥ ಸಂಪೂರ್ಣವಾದಂಥ ಅಲೋಕೇಶನ್ ಆರ್ಥಿಕ ಇಲಾಖೆಯಿಂದ ಹೋಗುತ್ತದೆ. ಆದರೆ ಸ್ಟೇಟ್ ಸೆಕ್ಟರ್ ಆಸ್ಪತ್ರೆಗಳಿಗೆ ಮಾತ್ರ ನಾವು ಮಾಡುತ್ತೇವೆ. ಇದು ಯಾವುದೇ ಇರಬಹುದು. ಎಲ್ಲೆಲ್ಲಿ ಈ ರೀತಿಯಾದ ಸಮಸ್ಯೆಗಳಿವೆ ಅದನ್ನು ಆ ಡಿಸ್ಟ್ರಿಕ್ಟ್ ಸೆಕ್ಟರ್‌ರವರಿಗೆ ತಿಳಿಸಬೇಕು ಮತ್ತು ಪ್ರತಿ ದಿವಸ ಅದನ್ನು ಬದಲಾವಣೆ ಮಾಡತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಇಲಾಖೆಯ ಎಲ್ಲರಿಗೂ ಸೂಚನೆಯನ್ನು ಕೊಟ್ಟಿದ್ದೇವೆ. ಹಾಗೆಯೇ, ಡಾಕ್ಟರ್ಸ್‌ದ್ದು ಮಂಜೂರು ಆಗಿಲ್ಲವೆಂದು ನಮ್ಮ ಮಾನ್ಯ ವಿಶ್ವನಾಥ್‌ನವರು ಏನು ಹೇಳಿದ್ದಾರೆ. ಇದರ ಬಗ್ಗೆ ಹೇಳುವುದಾದರೆ, ಇದು ಕಳೆದ 10 ವರ್ಷಗಳಿಂದ ಇರತಕ್ಕಂಥ ಸಮಸ್ಯೆ. ಫಿಜಿಕಲ್ ಆಗಿ ಅಪ್‌ಗ್ರೇಡ್ ಮಾಡಿರುತ್ತಾರೆ. ಆದರೆ, ಅಲ್ಲಿಗೆ ಸ್ಟಾಫ್‌ನ್ನು ಮಂಜೂರು ಮಾಡತಕ್ಕಂಥಾದ್ದು ಆಗಿರುವುದಿಲ್ಲ. ಈ ಸಾರಿ ಯಾವ್ಯಾವುದು ಡಿಸ್ಟ್ರಿಕ್ಟ್ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಮತ್ತು ಪಿ.ಹೆಚ್.ಸಿ. ಅಪ್‌ಗ್ರೇಡ್ ಆಗಿವೆ. ಈ ಎಲ್ಲಾ ಆಸ್ಪತ್ರೆಗಳಿಗೆ ಸಿಬ್ಬಂದಿಯನ್ನು ಮಂಜೂರು ಮಾಡಿಕೊಡಬೇಕೆಂಬುದರ ಬಗ್ಗೆ ನಾವು ಈಗಾಗಲೇ ಮೀಟಿಂಗ್ ಮಾಡಿ ಇದರ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಹ ಕಳುಹಿಸಿಕೊಟ್ಟಿದ್ದೇವೆ. ಇದು 10 ವರ್ಷಗಳಿಂದ ಇರತಕ್ಕಂಥ ಸಮಸ್ಯೆಯನ್ನು ಏಕಾಏಕಿ ಒಂದೇ ಸಲ ಬಗೆಹರಿಸುವುದಕ್ಕೆ ಕಷ್ಟವಾಗುತ್ತದೆ. ಆದರೆ, ಹಂತಹಂತವಾಗಿ ಇದನ್ನು ಸಂಪೂರ್ಣವಾಗಿ ಸರಿಪಡಿಸುವುದಕ್ಕೆ ಇಲಾಖೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಪಾವಗಡದ ಮಾನ್ಯ ಶಾಸಕರು ಮತ್ತು ಮಾನ್ಯ ಶಿವರಾಜ್ ಸಜ್ಜನ್‌ರವರು ಹೇಳಿರತಕ್ಕಂಥ ವಿಚಾರದ ಬಗ್ಗೆ ಹೇಳುವುದಾದರೆ, ನೇಮಕಾತಿ ವಿಚಾರದಲ್ಲಿ ಈಗಾಗಲೇ ಸಾಕಷ್ಟು ವಿಚಾರಗಳನ್ನು ಮತ್ತು ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಿರುವುದರಿಂದ ಇದರ ಬಗ್ಗೆ ನಾನು ಮತ್ತೆ ಮತ್ತೆ ಹೇಳತಕ್ಕಂಥಾದ್ದು ಸೂಕ್ತವಲ್ಲ. ಆದರೆ, ಕಳಪೆ ಔಷಧಿ ಸರಬರಾಜು ಆಗುತ್ತಿದೆ ಎಂಬ ವಿಷಯವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಈಗಾಗಲೇ ಇಲಾಖೆಯಲ್ಲಿ ಒಂದು ಕಮಿಟಿ ಮಾಡಿದ್ದು, ಮೈಸೂರು ಮತ್ತು ಬೆಂಗಳೂರಿನಲ್ಲಿ ಡ್ರಗ್ಸ್ ಬಗ್ಗೆ ತನಿಖೆ ಮಾಡಿ ಸಾಕಷ್ಟು ಕ್ರಮ ತೆಗೆದುಕೊಂಡು ಇದರ ಬಗ್ಗೆ ಕ್ರಿಮಿನಲ್ ಕೇಸ್‌ನ್ನೂ ಕೂಡ ದಾಖಲೆ ಮಾಡಿದ್ದೇವೆ. ಮಾನ್ಯ ಸದಸ್ಯರು ಈ ಕಳಪೆ ಔಷಧಿಯ ಬಗ್ಗೆ ನನಗೆ ಕಳುಹಿಸಿ ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳಿಂದ ನಾಳೆ

ದಿವಸವೇ ಮಾಹಿತಿ ತರಿಸಿ, ಇದರ ಬಗ್ಗೆ ಏನು ಕ್ರಮ ಜರುಗಿಸಬಹುದೆಂದು ಮತ್ತು ಇದು ಯಾವ ಕಂಪನಿಯಿಂದ ಸರಬರಾಜು ಆಗಿದೆ ಎನ್ನತಕ್ಕಂಥದ್ದರ ಬಗ್ಗೆ ಅಧಿಕಾರಿಗಳಿಂದ ತಕ್ಷಣ ಮಾಹಿತಿ ತರಿಸಿ ತಮಗೂ ಕೂಡ ಈ ಮಾಹಿತಿಯನ್ನು ಕೊಡುತ್ತೇನೆ. ಹಾಗೆಯೇ ಈ ಮಾಹಿತಿಯನ್ನು ಮಾಹಿತಿ ಮಾನ್ಯ ಸದಸ್ಯರಿಗೂ ಸಹ ಕೊಡುತ್ತೇನೆ. ಮತ್ತೆ ಇದರ ಬಗ್ಗೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು: ಮುಂದಿನ ಪ್ರಶ್ನೆ ಮಾನ್ಯ ಎ.ಬಿ. ಪಾಟೀಲ್‌ರವರದ್ದು. ಅವರು ಇಲ್ಲವೆಂದು ಕಾಣುತ್ತದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ: 03–08–2005ರ 44ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 54 ಪ್ರಶ್ನೆಗಳ ಪೈಕಿ 50 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ – V)

4. ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಅ) ವಿಷಯ: ಹೇಮಾವತಿ ನಾಲೆ ಒಡೆದು ಹೋಗುವ ಪರಿಸ್ಥಿತಿ ಇರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಉಪಾಧ್ಯಕ್ಷರೆ, ಹೇಮಾವತಿ ನಾಲೆಯಲ್ಲಿ ನೀರು ಬಿಟ್ಟ ಮೇಲೆ ಅಲ್ಲಿರತಕ್ಕಂಥ 6 ಸೇತುವೆಗಳಿಗೆ ಅಡ್ಡಲಾಗಿ ಹೊಸ ಮತ್ತು ಹಳೆ ಸೇತುವೆಗಳನ್ನು ಸರಿಯಾಗಿ ಯೋಜನೆ ಮಾಡದೆ ಕಟ್ಟಿರುವುದರಿಂದ ಇವತ್ತಿನ ದಿವಸ ಹೇಮಾವತಿ ನೀರು ಬಂದು ಅಲ್ಲಿ ಬ್ಲಾಕ್ ಆಗಿದೆ. ಇದರಿಂದ ತುಮಕೂರು ಜಿಲ್ಲೆಗಾಗಲಿ ಅಥವಾ ನಾಗಮಂಗಲ ತಾಲ್ಲೂಕಿಗಾಗಲಿ ನೀರು ಹರಿಯುತ್ತಿಲ್ಲ. ಹೇಮಾವತಿ ಕೆನಾಲ್‌ಗೆ ನೀರು ಬಿಟ್ಟಿದ್ದರೂ ಕೂಡ ಅಲ್ಲಿನ ಡ್ಯಾಂಗೆ ಬರುತ್ತಿರುವ ನೀರು ಹೆಚ್ಚಾಗಿರುವುದರಿಂದ ಒಂದು ಕಡೆ ನೀರು ಡಿಸ್‌ಚಾರ್ಜ್ ಆಗುತ್ತಿಲ್ಲ ಮತ್ತೊಂದು ಕಡೆಯಿಂದ ಹೆಚ್ಚು ನೀರು ಬಂದು ಅಪಾಯದ ಸೂಚನೆಗಳು ಕಾಣುತ್ತಿವೆ. ಆದ್ದರಿಂದ, ತುಮಕೂರಿಗೆ ಹೇಮಾವತಿ ನಾಲೆಯಿಂದ ನೀರು ಏನು ಬರುತ್ತಿದೆ, ಈ ನೀರು ಹರಿಯುವುದಕ್ಕೆ ಅಲ್ಲಿರತಕ್ಕಂತ ಅಬ್‌ಸ್ಟ್ರಕ್ಷನ್ಸ್‌ನ್ನು ತಕ್ಷಣ ರಿಮೂವ್ ಮಾಡಿಸಬೇಕಾಗಿತ್ತು. ಆದರೆ, ಈ ಇಲಾಖೆಯವರು ಇದನ್ನು ಮಾಡುತ್ತಿಲ್ಲ. ಮತ್ತೆ ಆ ಸೇತುವೆಗಳನ್ನು ಮಾಡಿರತಕ್ಕಂಥ ಇಂಜಿನಿಯರ್‌ಗಳ ಮೇಲೆ ಉಗ್ರವಾದ ಕ್ರಮವನ್ನು ಜರುಗಿಸಬೇಕಾಗುತ್ತದೆ. ಅವರು ಅಲೈನ್‌ಮೆಂಟ್‌ನ್ನೇ ನೋಡಿಲ್ಲ. ಹಳೆಯ ಮತ್ತು ಹೊಸ ಸೇತುವೆಗಳಿಗೆ ನೇರ ಲಿಂಕ್ ಇಲ್ಲದಂತಾಗಿ ಹೊಸ ಸೇತುವೆಯಿಂದ ನೀರು ಬಿಟ್ಟರೆ ಹಳೆಯ ಸೇತುವೆಯಲ್ಲಿ ಬ್ಲಾಕ್ ಆಗುತ್ತಿದೆ. ಇದರಿಂದ ಯಾವ ಗಳಿಗೆಯಲ್ಲಿ ಬೇಕಾದರೂ ಆ ನಾಲೆಯ ದಂಡೆ ಒಡೆದು ಹೋಗುವಂಥ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಅಲ್ಲಿ ಏನು ಕಟ್ಟಿಕೊಂಡಿದೆ ಅದನ್ನು ತಕ್ಷಣ ತೆಗೆಸಿ ತುಮಕೂರು ಕಡೆಗೆ ನೀರನ್ನು ಹರಿಸುವುದಕ್ಕೆ ವ್ಯವಸ್ಥೆ ಮಾಡಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ಇವತ್ತಿನ ದಿವಸ ಇಡೀ ಹೇಮಾವತಿ ಕೆನಾಲ್ ಒಡೆದು ಹೋಗತಕ್ಕಂಥ